**MAY 12,2025**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

ವಿಶ್ವಕ್ಕೆ ಶಾಂತಿ ಸಂದೇಶ ನೀಡಿದ ಭಗವಾನ್ ಬುದ್ಧರ 2 ಸಾವಿರದ 2 ನೂರಾ 69 ನೇ ಜಯಂತಿಯನ್ನು, ನಾಡಿನಾದ್ಯಂತ ಶ್ರದ್ಧಾಭಕ್ತಿಯಿಂದ ಆಚರಿಸಲಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಸೇರಿದಂತೆ ಗಣ್ಯರು 'ಬುದ್ಧ ಪೂರ್ಣಿಮೆ'ಯ ಶುಭಾಶಯಗಳನ್ನು ಕೋರಿದ್ದಾರೆ. ತಮ್ಮ ಎಕ್ಸ್ ಖಾತೆ ಮೂಲಕ ಬುದ್ಧ ಪೂರ್ಣಿಮೆ ಶುಭಾಶಯ ಸಂದೇಶವನ್ನು ಹಂಚಿಕೊಂಡಿರುವ, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ್ ಜೋಶಿಯವರು 'ಗೌತಮ ಬುದ್ಧ, ಶಾಂತಿ ಸಂದೇಶ ಸಾರಿದ, ಸತ್ಯದರ್ಶನದ ಸಾಕಾರಮೂರ್ತಿ, ಅವರ ತತ್ವಾದರ್ಶಗಳನ್ನು ಎಲ್ಲರೂ ಅನುಸರಿಸುವಂತಾಗಲಿ' ಎಂದು ಆಶಿಸಿದ್ದಾರೆ.

<><><>

ಧಾರವಾಡ, ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಬುದ್ಧ ಜಯಂತಿ ಕಾರ್ಯಕ್ರಮ ಜರುಗುತ್ತಿದೆ. ನಗರದ ಬುದ್ಧಿಸ್ಟ್ ಪಾಲಿ ಎಜುಕೇಶನ್ ಅಂಡ್ ರಿಸರ್ಚ್ ಟ್ರಸ್ಟ್, ಅಧ್ಯಕ್ಷ, ಪಬ್ಬಜ್ಜೊರವಿತಿಪಾಲಿ ವಿಜ್ಜಾ ಮುನಿಯೊ ಅವರು ಪ್ರದೇಶ ಸಮಾಚಾರದ ಮೂಲಕ ಬುದ್ಧ ಪೂರ್ಣಿಮೆ ಸಂದೇಶವನ್ನು ನೀಡಿದ್ದಾರೆ.

<><><>

ಬೈಟ್: ಪಬ್ಬಜ್ಜೊ ರವಿತಿಪಾಲಿ ವಿಜ್ಜಾ ಮುನಿಯೊ 38 ಸೆಕೆಂದುಗಳು

<><><>

ಇಂದು ಅಂತಾರಾಷ್ಟ್ರೀಯ ದಾದಿಯರ ದಿನ. 'ನಮ್ಮ ದಾದಿಯರು. ನಮ್ಮ ಭವಿಷ್ಯ. ದಾದಿಯರ ಬಗ್ಗೆ ಕಾಳಜಿ, ಆರ್ಥಿಕತೆಯನ್ನು ಸಬಲೀಕರಿಸುತ್ತದೆ' ಎಂಬುದು ಈ ಬಾರಿಯ ಘೋಷವಾಕ್ಯ. ವಿಶ್ವ ದಾದಿಯರ ದಿನದಂದು ಶುಭಾಶಯಗಳನ್ನು ತಿಳಿಸಿರುವ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ತಮ್ಮ ಎಕ್ಸ್ ಖಾತೆಯಲ್ಲಿ ' ದಾದಿಯರು ಆರೋಗ್ಯ ಕ್ಷೇತ್ರದ ಆಧಾರಸ್ಥಂಭವಾಗಿದ್ದಾರೆ. ಸಮುದಾಯದ ಆರೋಗ್ಯ ಕಾಪಾಡಿ, ಸುದೃಢಗೊಳಿಸಿ ರಾಜ್ಯದ ಸ್ಥಿತಿಸ್ಥಾಪಕತ್ವಕ್ಕೆ ದಾದಿಯರ ಕೊಡುಗೆ ಅನನ್ಯವಾಗಿದೆ ಎಂದಿದ್ದಾರೆ.

<><><>

ಕೃಷಿ ಕ್ಷೇತ್ರದ ಹಿಮ್ಮುಖ ಚಲನೆಗೆ, ಬೆಳೆಗಳಿಗೆ ವಿವಿಧ ರೋಗ ಬಾಧೆ ಹಾಗೂ ರೈತರ ಅನಾದರ ಕಾರಣ; ಕೃಷಿಯಲ್ಲಿ ರೈತರು ವಿಶ್ವಾಸ ಉಳಿಸಿಕೊಳ್ಳುವಂತೆ, ಮಣ್ಣಿನ ಸತ್ವ ಕಾಪಾಡಬೇಕಿದೆ ಎಂದು, ಸೋಂದಾ ಶ್ರೀ ಸ್ವರ್ಣವಲ್ಲಿ ಮಠದ ಶ್ರೀ

ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಹೇಳಿದ್ದಾರೆ. ಉತ್ತರಕನ್ನಡ ಜಿಲ್ಲೆ, ಶಿರಸಿಯ ಸೋಂದಾ ಶ್ರೀ ಸ್ವರ್ಣವಲ್ಲಿ ಮಠದಲ್ಲಿ ಆಯೋಜಿಸಿದ್ದ, ಕೃಷಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಹುಬ್ಬಳ್ಳಿಯ ಶ್ರೀ ಮೂರುಸಾವಿರ ಮಠದ, ಶ್ರೀ ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ ಮಾತನಾಡಿ, ಸಾಂಪ್ರದಾಯಿಕ ಕೃಷಿಗೆ ಒತ್ತು ನೀಡಬೇಕಿದೆ. ಗೋ ಆಧಾರಿತ ಸಾವಯವ ಕೃಷಿ ಪದ್ಧತಿಯನ್ನು ಪ್ರವರ್ಧಮಾನಕ್ಕೆ ತರಬೇಕಿದೆ ಎಂದರು.

<><><>

ಮಲಪ್ರಭಾ ಬಲದಂಡೆ ಕಾಲುವೆ ವ್ಯಾಪ್ತಿಯ, ಧಾರವಾಡ ಜಿಲ್ಲೆಯ ನವಲಗುಂದ, ಅಣ್ಣಿಗೇರಿ, ಹುಬ್ಬಳ್ಳಿ ಹಾಗೂ ಕುಂದಗೋಳ ತಾಲೂಕುಗಳ, ವಿವಿಧ ಗ್ರಾಮಗಳ ಕುಡಿಯುವ ನೀರಿನ ಕೆರೆಗಳಿಗೆ, ನಾಳೆಯಿಂದ 22ರ ವರೆಗೆ, ನೀರು ತುಂಬಿಸಲಾಗುತ್ತಿದೆ. ಧಾರವಾಡ ಜಿಲ್ಲಾಧಿಕಾರಿ ದಿವ್ಯಾ ಪ್ರಭು ಮಾಹಿತಿ ನೀಡಿ, ಬೆಳಗಾವಿ ಜಿಲ್ಲೆ, ಸವದತ್ತಿ ತಾಲೂಕು, ನವಿಲುತೀರ್ಥ ಜಲಾಶಯದಿಂದ, ನೀರು ಬಿಡಲು ಪ್ರಾದೇಶಿಕ ಆಯುಕ್ತರು ಅದೇಶಿಸಿದ ಹಿನ್ನೆಲೆ, ನೀರಿನ ಸದ್ಬಳಕೆ ಬಗ್ಗೆ ನಿಗಾವಹಿಸಲು, ನೋಡಲ್ ಅಧಿಕಾರಿಗಳನ್ನು ನೇಮಿಸಿದ್ದಾಗಿ, ತಿಳಿಸಿದ್ದಾರೆ.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರದ, ಇತಿಹಾಸ ಪ್ರಸಿದ್ಧ ಸಪ್ತ ಮಾತೃಕಾ ಮಾರಿಯಮ್ಮ ದೇವಿಯ ಕರಗ ಮಹೋತ್ಸವ, ಇಂದು ರಾತ್ರಿ ನಡೆಯಲಿದೆ. ತನ್ನಿಮಿತ್ತ, ಹಸಿ ಕರಗ ಮಹೋತ್ಸವ, ಶ್ರದ್ಧಾ ಭಕ್ತಿಗಳಿಂದ ನಿನ್ನೆ ನೆರವೇರಿತು. ಕರಗ ಹೊತ್ತ ಪೂಜಾರಿ, ಮುನಿರತ್ನಂ ಬಾಲಾಜಿ ಅವರು, ಧಾರ್ಮಿಕ ವಿಧಿ ನೆರವೇರಿಸಿದರು.

<><><>

ಈ ಬಾರಿ ವಾಡಿಕೆಗಿಂತ, ಮೊದಲು ಹಾಗೂ ಹೆಚ್ಚು ಮಳೆಯಾಗುವ ಸಂಭವವಿದ್ದು, ಯಾವುದೇ ಪ್ರಾಣ ಹಾಗೂ ಆಸ್ತಿ ಹಾನಿಯಾಗದಂತೆ, ಸೂಕ್ತ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ, ಉಡುಪಿ ಜಿಲ್ಲೆ ಉಸ್ತುವಾರಿ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್, ಜಿಲ್ಲಾಡಳಿತಕ್ಕೆ ಸೂಚಿಸಿದ್ದಾರೆ.

<><><>

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸೂಚನೆ ಮೇರೆಗೆ ಜಿಲ್ಲೆಯಲ್ಲಿ ಸಾರ್ವಜನಿಕರು ಸುಳ್ಳು ಸುದ್ದಿಗಳಿಗೆ ಕಿವಿಕೊಡಬಾರದು. ಜಿಲ್ಲಾಡಳಿತ ನೀಡುವ ಮಾಹಿತಿಯನ್ನು ಅಧಿಕೃತ ಎಂದು ಪರಿಗಣಿಸಬೇಕು ಎಂದು ಯಾದಗಿರಿ ಜಿಲ್ಲಾಧಿಕಾರಿ ಡಾಕ್ಟರ್ ಬಿ.ಸುಶೀಲಾ ತಿಳಿಸಿದ್ದಾರೆ. ವ್ಯಾಪಾರಿಗಳು, ಅಗತ್ಯ ವಸ್ತುಗಳ ಬೆಲೆಯನ್ನು ಅನಗತ್ಯವಾಗಿ ಹೆಚ್ಚಳ ಮಾಡುವ ಪ್ರಯತ್ನ ಮಾಡಿದಲ್ಲಿ, ಅಂತಹವರ ವಿರುದ್ಧ ಕಾನೂನು ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.

<><><>